KARN010031402022

Presented on: 23-11-2022
Registered on: 28-11-2022
Decided on : 02-06-2026
Duration : 03 years, 06 months 04 days

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

**:ಉಪಸ್ಥಿತರು:**

ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

M H ANNAYYANAVAR
Digitally signed by M H ANNAYYANAVAR
Date: 2026.06.02 18:03:24 +0530

**ದಿನಾಂಕ 2 ನೇ ಜೂನ್ ಮಾಹೆ 2026**

**ಮಧ್ಯಸ್ಥಗಾರ ಅರ್ಜಿ ಸಂಖ್ಯೆ.453/2022**

ಅರ್ಜಿದಾರರು : ಶ್ರೀ ಮುತ್ತಯ್ಯ,
ಬಿನ್ ಲೇಟ್ ತಿಮ್ಮಯ್ಯ,
ವಯಸ್ಸು ಸುಮಾರು 67 ವರ್ಷ,
ವಾಸ: ವಡೇರಹಳ್ಳಿ ಗ್ರಾಮ,
ರಾಮನಗರ ಅಂಚೆ,
ರಾಮನಗರ ತಾಲ್ಲೂಕು ಮತ್ತು ಜಿಲ್ಲೆ.

**(ಪರವಾಗಿ : ಶ್ರೀ ಬಿ.ಕೆ.ಸಿ., ವಕೀಲರು)**

**-ವಿರುದ್ಧ -**

ಪ್ರತಿ ಅರ್ಜಿದಾರರು : **1.** ವಿಶೇಷ ಭೂಸ್ವಾಧೀನಾಧಿಕಾರಿಗಳು
ಮತ್ತು ಸಕ್ಷಮ ಪ್ರಾಧಿಕಾರಿಗಳು,
ಎನ್.ಹೆಚ್.ಎ.ಐ. ರಾಷ್ಟ್ರೀಯ ಹೆದ್ದಾರಿ - 275,
(ಬೆಂಗಳೂರು-ಮೈಸೂರು ವಿಭಾಗ)

ಸ್ಟೈಟ್ ಆಫ್: ಸಿಟಿ ಮುನಿಸಿಪಲ್ ಓಲ್ಡ್ ಬಿಲ್ಡಿಂಗ್,
1 ನೇ ಫ್ಲೋರ್, ಮಹಾವೀರ್ ವೃತ್ತ,
ಮಂಡ್ಯ – 571401.

**2**) ಯೋಜನಾ ನಿರ್ದೇಶಕರು ಮತ್ತು
ವ್ಯವಸ್ಥಾಪಕರು (ತಾಂತ್ರಿಕ),
ಯೋಜನಾ ಅನುಷ್ಠಾನ ಘಟಕ,
ಎನ್.ಹೆಚ್.ಎ.ಐ., ರಾಷ್ಟ್ರೀಯ ಹೆದ್ದಾರಿ-275,
(ಬೆಂಗಳೂರು-ಮೈಸೂರು ವಿಭಾಗ),
ಬಸವನಪುರ,
ರಾಮನಗರ – 562 128.

3) ಮಧ್ಯಸ್ಥಗಾರರು ಮತ್ತು ಜಿಲ್ಲಾಧಿಕಾರಿಗಳು,
ರಾಮನಗರ ಜಿಲ್ಲೆ, ರಾಮನಗರ.
**(1, 2** ಪರವಾಗಿ **:** ಶ್ರೀ ಬಿ**.**ವಿ**.**ಪಿ**.**ಎ**.,** ವಕೀಲರು**)**
**(3** ಪರವಾಗಿ ಡಿ**.**ಜಿ**.**ಪಿ**.)**

*****

:: ತೀ ರ್ಪು ::

ಅರ್ಜಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಮಧ್ಯಸ್ಥಗಾರ ಮತ್ತು ಸಂಧಾನ ಕಾಯ್ದೆ -1996 ರ ಕಲಂ-34 ಸಹ ಕಲಂ 3 ಜಿ(6) ರಡಿಯಲ್ಲಿ ಅರ್ಜಿ ಸಲ್ಲಿಸಿ ಮಾನ್ಯ ನ್ಯಾಯಾಲಯವು 3 ನೇ ಎದುರುದಾರರು ಎಲ್ಎಕ್ಯೂ**(**ಎ**)/**ಎನ್ಹೆಚ್**-275/** ಸಿಆರ್**/191/2017-18** ದಿನಾಂಕ:**21-07-2022** ರಂದು ಮಾಡಿದಂತ ಆದೇಶವನ್ನು ಮಾರ್ಪಾಡು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. **ಈ ಕೇಸಿನ ಸಂಕ್ಷಿಪ್ತ ಸಾರಾಂಶ:**

ಅರ್ಜಿದಾರರು ರಾಮನಗರ ತಾಲ್ಲೂಕು ಮತ್ತು ಜಿಲ್ಲೆ, ಕಸಬಾ ಹೋಬಳಿ, ವಡೇರಹಳ್ಳಿ ಗ್ರಾಮ ಸರ್ವೆ ನಂ.3/1, 2/2B, ಒಟ್ಟು ಕ್ಷೇತ್ರ 7828 ಚದುರ ಮೀಟರ್ ಬೆಂಗಳೂರು-

ಮೈಸೂರು ರಾಷ್ಟ್ರೀಯ ಹೆದ್ದಾರಿ-275 ಕ್ಕೆ ಅಂದರೆ 1 ನೇ ಎದುರುದಾರರು ಸ್ವಾಧೀನಪಡಿಸಿಕೊಂಡಿದ್ದು, ಇದಕ್ಕೆ ಸಂಬಂಧಪಟ್ಟಂತೆ ಸದರಿ ಕಾನೂನು ಕಲಂ 3(ಎ) ದಿನಾಂಕಃ01-02-2016 ಪ್ರಕಾರ ಪ್ರಾಥಮಿಕ ಅಧಿಸೂಚನೆ, ಕಲಂ.3(ಡಿ) ಪ್ರಕಾರ ದಿನಾಂಕಃ23-09-2016 ಅಂತಿಮ ಅಧಿಸೂಚನೆ, ದಿನಾಂಕಃ08-03-2017 ರಂದು ಅವಾರ್ಡ್ ಮಾಡಿ, ದಿನಾಂಕಃ12-09-2017 ರಂದು ಅರ್ಜಿದಾರರಿಗೆ ಅವಾರ್ಡ್ ನೋಟೀಸು ಕಳುಹಿಸಿ 1 ಎಕರೆಗೆ ರೂ.1,59,00,000-00 ರೂ. ಪರಿಹಾರ ನಿಗಧಿಪಡಿಸಿದ್ದು, ಭೂಸ್ವಾಧೀನಪಡಿಸಿಕೊಂಡಂತ ಕ್ಷೇತ್ರಕ್ಕೆ ಪರಿಹಾರ ರೂ.1,02,46,852-00, ಭೂ ಮಾಲೀಕರಿಗೆ ಪಾವತಿ ಮಾಡಿದ ಹಣ ರೂ.3,57,23,567-00 ನಿಗಧಿಪಡಿಸಿ ನಂತರ ಉಭಯ ವಕೀಲರ ವಾದವನು ಪರಿಗಣಿಸಿ ಹೆಚ್ಚಿಗೆ ಪರಿಹಾರ ನೀಡಬೇಕು ಅಂತ ಕೇಳಿದ ವಿನಂತಿಯನ್ನು ತಿರಸ್ಕರಿಸಿ ದಿನಾಂಕಃ21-07-2022 ರಂದು ಆದೇಶ ಮಾಡಿರುತ್ತಾರೆ.

3. ಸದರಿ 1 ನೇ ಎದುರುದಾರರು ಮಾರುಕಟ್ಟೆ ಮೌಲ್ಯವನ್ನು ಪರಿಗಣಿಸದೆ ಸಮರ್ಪಕವಾದಂತ ಪರಿಹಾರವನ್ನು ನೀಡಿಲ್ಲದೇ ಇರುವುದರಿಂದ ಅವಾರ್ಡ್ ಅರ್ಜಿದಾರರಿಗೆ ತೃಪ್ತಿ ಆಗಿಲ್ಲದೇ ಇರುವುದರಿಂದ, ಹೆಚ್ಚಿಗೆ ಪರಿಹಾರ ಬೇಕು ಅಂತ 1 ನೇ ಎದುರುದಾರರ ಬಳಿ ತಕರಾರು ಸಲ್ಲಿಸಿದ್ದು, ಆ ಪ್ರಕಾರ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ 3 ನೇ ಎದುರುದಾರರು ಆರ್ಬಿಟ್ರೇಟರ್ ಆಗಿ ನೇಮಕ ಮಾಡಿದ್ದು, ನಂತರ 3 ನೇ ಎದುರುದಾರರು ಉಭಯ ಪಕ್ಷಗಾರರರಿಗೆ ನೋಟೀಸು ಜಾರಿ ಮಾಡಿ ತಕರಾರನ್ನು ಪಡೆದುಕೊಂಡು ಉಭಯ ವಕೀಲರ ಲಿಖಿತ ವಾದ ಮಂಡಣೆ, ದಾಖಲೆಗಳನ್ನು ಪರಿಶೀಲಿಸಿ ಭೂಸ್ವಾಧೀನಾಧಿಕಾರಿಗಳು

ಮಾಡಿದಂತ ಅವಾರ್ಡ್ ನ್ಯಾಯಸಮ್ಮತವಾಗಿರುತ್ತದೆ ಅಂತ ಪರಿಗಣಿಸಿ ದಿನಾಂಕಃ 08-12-2020 ರಂದು ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ ಅವಾರ್ಡ್ ಮಾಡಿರುತ್ತಾರೆ.

4. ನಂತರ ಅರ್ಜಿದಾರರು ಎದುರುದಾರ 3 ಇವರು ಮಾಡಿದ ಅವಾರ್ಡ್ ವಿರುದ್ಧ ಅರ್ಜಿದಾರರಾಗಿ ಈ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ 3 ನೇ ಎದುರುದಾರರು ಅವಾರ್ಡ್ ಮಾಡುವಾಗ ಸಾಕ್ಷಿ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿರುವುದಿಲ್ಲ. ಹಾಜರುಪಡಿಸಿದಂತ ಕ್ರಯಪತ್ರಗಳ ಹೆಚ್ಚಿಗೆ ಮೌಲ್ಯವನ್ನು ಪರಿಗಣಿಸಿರುವುದಿಲ್ಲ. ರಾಷ್ಟ್ರೀಯ ಹೆದ್ದಾರಿ ಕಾನೂನು 1956 ಕಲಂ 3(ಜಿ)(7) ರ ಗೈಡ್ ಲೈನ್ಸ್ ಅನ್ನು ಪರಿಗಣಿಸಿರುವುದಿಲ್ಲ. ಸಾಕ್ಷಿಗಳನ್ನು ವಿಶ್ಲೇಷಣೆ ಮಾಡಿರುವುದಿಲ್ಲ. ಎದುರುದಾರ 1, 2 ಇವರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅರ್ಜಿದಾರರು ಹಾಜರುಪಡಿಸಿದಂತ ಸ್ವಾಧೀನಪಡಿಸಿಕೊಂಡಂತ ಜಮೀನಿನ ಅಕ್ಕಪಕ್ಕದ ಕ್ರಯಪತ್ರದ ಮೌಲ್ಯಗಳನ್ನು ಪರಿಗಣಿಸಿರುವುದಿಲ್ಲ. ಪ್ಯಾಕ್ಟರ್ ಅನ್ನು ಸಮರ್ಪಕವಾಗಿ ಪರಿಗಣಿಸಿರುವುದಿಲ್ಲ. ಮಾನ್ಯ ಸರ್ವೋಚ್ಚ ಮತ್ತು ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳನ್ನು ಪರಿಗಣಿಸಿರುವುದಿಲ್ಲ. ಸ್ವಾಧೀನ ಪಡಿಸಿಕೊಂಡಂತ ಸ್ವತ್ತು ರಾಮನಗರ ನಗರ ಪುರಸಭಾ ವ್ಯಾಪ್ತಿಯಿಂದ 5 ಕಿ.ಮೀ. ಹೆಚ್ಚಿಗೆ ಇದ್ದು, ಇದರ ಬಗ್ಗೆ ಸಮರ್ಪಕವಾಗಿ ಪ್ಯಾಕ್ಟರ್ ಅನ್ನು ಪರಿಗಣಿಸದೆ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಿದ್ದು ನ್ಯಾಯ ಸಮ್ಮತವಾಗಿರುವುದಿಲ್ಲ. ಆದ್ದರಿಂದ ಸದರಿ ಅವಾರ್ಡನ್ನು ರದ್ದುಪಡಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

5. ನಂತರ ಸದರಿ ಪ್ರಕರಣ ನೊಂದಣಿ ಮಾಡಿಕೊಂಡು ಎದುರುದಾರರಿಗೆ ನೋಟೀಸು ಕಳುಹಿಸಲಾಗಿ, ಎದುರುದಾರ 1, 2 ಇವರು ಸದರಿ ಅರ್ಜಿಗೆ ತಕರಾರು ಸಲ್ಲಿಸಿ 3 ನೇ ಎದುರುದಾರರು ಮಾಡಿದಂತ ಅವಾರ್ಡ್ ನ್ಯಾಯಸಮ್ಮತವಾಗಿದ್ದು ಯಾವುದೇ ಲೋಪ ದೋಷಗಳಿಂದ ಕೂಡಿರುವುದಿಲ್ಲ. ದಾಖಲಾತಿಗಳನ್ನು ಪರಿಗಣಿಸಿ ಅವಾರ್ಡ್ ಮಾಡಿದ್ದು ನ್ಯಾಯ ಸಮ್ಮತವಾಗಿರುತ್ತದೆ. ಸದರಿ ಅವಾರ್ಡನ್ನು ಬದಲಾವಣೆ ಮಾಡಲು ಯಾವುದೇ ಅಂಶಗಳು ಕಂಡು ಬಂದಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ತಕರಾರು ಸಲ್ಲಿಸಿರುತ್ತಾರೆ.

6. ಎದುರುದಾರ 3 ಇವರಿಗೆ ನೋಟೀಸ್ ಜಾರಿಯಾಗಿದ್ದು, ತಕರಾರು ಸಲ್ಲಿಸಿರುತ್ತಾರೆ. ತಕರಾರಿನಲ್ಲಿ ಸದರಿ ಎದುರುದಾರರು ಅರ್ಜಿದಾರರು ಹಾಜರುಪಡಿಸಿದಂತ ದಾಖಲಾತಿಗಳು, ಲಿಖಿತ ವಾದ ಮಂಡಣೆ, ಕಾನೂನು ಅಂಶಗಳನ್ನು ಪರಿಗಣಿಸಿ ಸಮರ್ಪಕವಾದ ಕಾರಣಗಳನ್ನು ನೀಡಿ ಅವಾರ್ಡ್ ಮಾಡಿದ್ದು ಸದರಿ ಅವಾರ್ಡನ್ನು ರದ್ದುಪಡಿಸಲು ಯಾವುದೇ ಸಕಾರಣಗಳು ಇರುವುದಿಲ್ಲ. ಆದ್ದರಿಂದ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಬೇಕೆಂದು ತಕರಾರು ಸಲ್ಲಿಸಿರುತ್ತಾರೆ.

7. ಉಭಯ ವಕೀಲರ ವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ:-

1. ಅರ್ಜಿದಾರರು ಎದುರುದಾರ 3 ಇವರು ಪ್ರಕರಣ ಸಂಖ್ಯೆ **ಎಲ್ಎಕ್ಯೂ(ಎ)/ಎನ್‌ಹೆಚ್-275/ಸಿಆರ್/191/2017-18 ದಿನಾಂಕಃ21-07-2022** ರಂದು ವಜಾ ಮಾಡಲು ನೀಡಿದ ಕಾರಣಗಳು ನ್ಯಾಯಾಸಮ್ಮತವಾಗಿರುವುದಿಲ್ಲ ಅಂತ ಮೇಲ್ನೋಟಕ್ಕೆ ರುಜುವಾತುಪಡಿಸುತ್ತದೆಯೇ?

2. ಹಾಗಿದ್ದಲ್ಲಿ 3 ನೇ ಎದುರುದಾರರು ಮಾಡಿದ ಆದೇಶದಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಬಹುದೆ?

3. ಯಾವ ಆದೇಶ ?

8. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಅಂಶ ನಂ.1 | : | ನಕಾರಾತ್ಮಕವಾಗಿ |
| ಅಂಶ ನಂ.2 | : | ನಕಾರಾತ್ಮಕವಾಗಿ |
| ಅಂಶ ನಂ.3 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ: |

## ಕಾರಣಗಳು

9. **ಅಂಶ ಸಂಖ್ಯೆ 1 ಮತ್ತು 2:** ನ್ಯಾಯಾಲಯದ ಅನುಕೂಲಕ್ಕೋಸ್ಕರವಾಗಿ ಈ ಅಂಶಗಳನ್ನು ಏಕಕಾಲಕ್ಕೆ ತೆಗೆದುಕೊಳ್ಳಲಾಗಿದೆ.

10. ಅರ್ಜಿದಾರರ ಪರ ವಕೀಲರು ವಾದ ಮಾಡುತ್ತಾ ಎದುರುದಾರ 3 ಇವರು ಅರ್ಜಿದಾರರ ಜಮೀನಿನ ಅಕ್ಕಪಕ್ಕದಲ್ಲಿ ವಾಣಿಜ್ಯ ಉದ್ದೇಶ ಮತ್ತು ಕೈಗಾರಿಕಾ ಉದ್ದೇಶಕ್ಕೆ ಅಭಿವೃದ್ಧಿ ಹೊಂದಿದಂತ ಪ್ರದೇಶ ಇದ್ದಾಗ್ಯೂ ಸಹಿತ 1 ಎಕರೆಗೆ ರೂ.53,00,000-00 ಹಾಗೂ 1 ಚ.ಅ.ಗೆ ರೂ.8,000-00 ಮಾರುಕಟ್ಟೆ ಮೌಲ್ಯ ನಿಗಧಿಪಡಿಸಿದ್ದು ನ್ಯಾಯಸಮ್ಮತವಾಗಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕೆಂದು ವಾದ ಮಂಡಿಸಿರುತ್ತಾರೆ.

11. ಎದುರುದಾರ ಪರ ವಕೀಲರು ವಾದ ಮಾಡುತ್ತಾ ಎದುರುದಾರ 3 ಇವರು ಉಭಯ ವಕೀಲರು ಹಾಜರುಪಡಿಸಿದಂತ ದಾಖಲಾತಿಗಳನ್ನು ಪರಿಗಣಿಸಿ ಆದೇಶ ಮಾಡಿದ್ದು ನ್ಯಾಯ

ಸಮ್ಮತವಾಗಿರುತ್ತದೆ. ಸದರಿ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಇರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ವಾದ ಮಂಡಿಸಿರುತ್ತಾರೆ.

12. ಉಭಯ ವಕೀಲರ ವಾದವನ್ನು ಪರಿಶೀಲಿಸಲಾಯಿತು.

13. <u>**3** ನೇ ಎದುರುದಾರರು ಪರಿಗಣಿಸಿದ ಮಾರುಕಟ್ಟೆ ಮೌಲ್ಯ ನ್ಯಾಯ ಸಮ್ಮತವಾಗಿದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ:</u> ನ್ಯಾಯಾಲಯವು ಅರ್ಜಿದಾರರ ಜಮೀನನ್ನು 1 ನೇ ಎದುರುದಾರರು ಸ್ವಾಧೀನಪಡಿಸಿಕೊಳ್ಳುವಾಗ ಆ ಸಮಯದಲ್ಲಿ ಜಮೀನಿನ ಮಾರುಕಟ್ಟೆಯ ಬೆಲೆ ಎಷ್ಟು ಇತ್ತು ಎಂಬುದರ ಬಗ್ಗೆ ಪರಿಗಣಿಸಬೇಕಾಗಿರುವುದರಿಂದ, ಅರ್ಜಿದಾರರ ಜಮೀನು ಖುಷ್ಕಿ ಜಮೀನಾಗಿದ್ದು ಪ್ರಾಥಮಿಕ ಅಧಿಸೂಚನೆ ಹೊರಡಿಸುವ ಸಮಯದಲ್ಲಿ ಮಾರುಕಟ್ಟೆಯ ಧರ, ಜಮೀನಿನ ಸ್ಥಿತಿಗತಿಯನ್ನು ಪರಿಗಣಿಸಿ, ಖುಷ್ಕಿ ಜಮೀನಿಗೆ 1 ಎಕರೆಗೆ ರೂ.53,00,000-00 ಹಾಗೂ ಫ್ಯಾಕ್ಟರ್ ಗೆ 1.5 ರಂತೆ ಶೇ.100 ರಷ್ಟು ಸೋಲೇಶಿಯಂ, ಸದರಿ ಮಾರುಕಟ್ಟೆ ಧರಕ್ಕೆ ಅನುಗುಣವಾಗಿ ಪರಿಹಾರ ಹಣಕ್ಕೆ ಶೇ.12 ರಂತೆ ಪರಿಗಣಿಸಲಾಗಿದ್ದು, ಅರ್ಜಿದಾರರ ಜಮೀನು ಖುಷ್ಕಿ ಜಮೀನು ಆಗಿರುವುದರಿಂದ ಎಕರೆಯ ಅಡಿಯಲ್ಲಿ ಮೌಲ್ಯಮಾಪನ ಪರಿಗಣಿಸಬೇಕಾಗುತ್ತದೆ ವಿನಃ ಚದುರ ಅಡಿಯಲ್ಲಿ ಮೌಲ್ಯಮಾಪನ ಪರಿಗಣಿಸಲು ಬರಲಾರದು. ಅರ್ಜಿದಾರರು 1 ನೇ ಎದುರುದಾರರು ಅವಾರ್ಡ್ ಮಾಡುವ ಸಮಯದಲ್ಲಿ ಹಾಜರುಪಡಿಸಿದಂತ ದಾಖಲೆಗಳನ್ನು 3 ನೇ ಎದುರುದಾರರು ಪರಿಗಣಿಸಿದ್ದು ಹಾಗೂ ಇನ್ನೂ ಹೆಚ್ಚಿಗೆ ಬೆಲೆ ಬಾಳುತ್ತದೆ ಅಂತ ತೋರಿಸಲು ಅರ್ಜಿದಾರರಿಗೆ ಅವಕಾಶ ಕೊಟ್ಟರೂ ಸಹಿತ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಅದೇ ಪ್ರಕಾರ ಅರ್ಜಿದಾರರ ಜಮೀನಿನಲ್ಲಿರುವ ಮರ, ಮಾಲ್ಕಿ

ಹಾಗೂ ಕಟ್ಟಡ ಮತ್ತು ಇತರೇ ರೂಪಿತಗಳಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಗೊತ್ತುಪಡಿಸಿರುವ ತಾಂತ್ರಿಕ ತಜ್ಞರ ಮೌಲ್ಯಮಾಪನದಂತೆ ಪರಿಗಣಿಸಲಾಗಿರುತ್ತದೆ. ಆದ್ದರಿಂದ ಎದುರುದಾರ 3 ಇವರು ಮಾಡಿದಂತ ಅವಾರ್ಡ್ ನ್ಯಾಯ ಸಮ್ಮತವಾಗಿರುತ್ತದೆ.

14. ಅರ್ಜಿದಾರರು ಹಾಜರುಪಡಿಸಿದ ಆವಲಗೆರೆ, ಕೆಂಚನಕುಪ್ಪೆ ಹುಲ್ಲಾರ್ ಹೊಸದೊಡ್ಡಿ ಗ್ರಾಮಕ್ಕೆ ಸಂಬಂಧಪಟ್ಟಂತ ಅವಾರ್ಡ್ ಪ್ರತಿಯನ್ನು ಹಾಜರುಪಡಿಸಿದ್ದು, ಅರ್ಜಿದಾರರ ಜಮೀನು ವಡೇರಹಳ್ಳಿ ಇದ್ದು ಮೇಲೆ ಹೇಳಿದ ಹಾಜರುಪಡಿಸಿದಂತಾ ಅವಾರ್ಡ್‌ಗಳು ಬೇರೆ ಗ್ರಾಮದಾಗಿದ್ದರಿಂದ, ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಮಾರುಕಟ್ಟೆ ಮೌಲ್ಯ ಅಂತರ ಇರುತ್ತದೆ. ಅರ್ಜಿದಾರರು ಹಾಜರುಪಡಿಸಿದಜತ ಅವಾರ್ಡ್ ವಡೇರಹಳ್ಳಿಗೆ ಸಂಬಂಧಪಟ್ಟಂತೆ ಇರುತ್ತದೆ ಅಂತ ತೋರಿಸಲು ಹಾಗೂ ಎಷ್ಟು ಅಂತರದಲ್ಲಿ ಇರುತ್ತದೆ ಅಂತ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ 3 ನೇ ಎದುರುದಾರರು ಉಭಯ ವಕೀಲರು ಹಾಜರುಪಡಿಸಿದಂತ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಆದೇಶ ಮಾಡಿದ್ದು ನ್ಯಾಯ ಸಮ್ಮತವಾಗಿರುತ್ತದೆ. ಸದರಿ ಆದೇಶದಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಇರುವುದಿಲ್ಲ.

15. <u>ಮಧ್ಯಸ್ಥಗಾರರು ಕಾನೂನು ಕಲಂ.34</u> ಅನ್ನು ಪರಿಶೀಲಿಸಲಾಗಿ, 3 ನೇ ಎದುರುದಾರರು ಮಾಡಿದಂತ ಆದೇಶ ಕಾನೂನು ಬಾಹಿರವಾಗಿದ್ದು, ಸಮರ್ಪಕವಾದಂತ ಕಾರಣಗಳನ್ನು ನೀಡಿಲ್ಲದೇ ಇದ್ದಾಗ, ಹಾಜರುಪಡಿಸಿದಂತ ದಾಖಲಾತಿಗಳನ್ನು ಪರಿಗಣಿಸದೇ

ಇದ್ದಾಗ ಅಸ್ಪಷ್ಟವಾಗಿದ್ದಾಗ, ಕಾನೂನು ಅಂಶಗಳನ್ನು ಪರಿಗಣಿಸದೇ ಇದ್ದಾಗ, ಸ್ಪಷ್ಟತೆ ಇಲ್ಲದೇ ಇದ್ದಾಗ, ಇಂತಹ ಸಂದರ್ಭದಲ್ಲಿ ಮಧ್ಯಸ್ಥಗಾರರು ಮಾಡಿದಂತ ಅವಾರ್ಡನ್ನು ರದ್ದುಪಡಿಸತಕ್ಕದ್ದು ಅಂತಾ ಸ್ಪಷ್ಟವಾದ ಕಾನೂನು ಇರುತ್ತವೆ.

16. ಅರ್ಜಿದಾರರ ಪರ ವಕೀಲರು ಹಾಜರುಪಡಿಸಿದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು **(2025)2 S.C.C. 417 OPG POWER GENERATION PRIVATE LIMITED -Vs- ENEXIO POWER COOLING SOLUTIONS INDIA PRIVATE LIMITED AND ANOTHER** ಹಾಗೂ **2022 LiveLaw (SC)584 National Highways Authority of India -vs- P.Nagaraju @ Cheluvaiah & Onr.**, ಸದರಿ ತೀರ್ಪುಗಳನ್ನು ಪರಿಶೀಲಿಸಲಾಗಿ, ಸದರಿ ಕಾನೂನು ಕಲಂ 34(2) (ಬಿ)(ii) ಪ್ರಕಾರ ಆರ್ಬಿಟ್ರಲ್ ಅವಾರ್ಡ್‌ನಲ್ಲಿ ಯಾವುದೇ ಲೋಪ ದೋಷಗಳು ಕಂಡು ಬಾರದೇ ಇದ್ದಾಗ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಲು ಬರಲಾರದು, ಅವಾರ್ಡ್ ಅಕ್ರಮವಾಗಿದ್ದಲ್ಲಿ ಅಥವಾ ಕಾನೂನು ಬಾಹಿರವಾಗಿದ್ದಲ್ಲಿ ಮಾತ್ರ ಪರಿಗಣಿಸಬೇಕಾಗುತ್ತದೆ, ಆರ್ಬಿಟ್ರಲ್ ಇವರು ಸಮರ್ಪಕವಾದ ಕಾರಣಗಳನ್ನು ನೀಡಿ ಆದೇಶ ಮಾಡಿದ್ದಲ್ಲಿ ಮಾನ್ಯ ನ್ಯಾಯಾಲಯ ಸದರಿ ಆದೇಶದಂತೆ ಹಸ್ತಕ್ಷೇಪ ಮಾಡಲು ಬರಲಾರದು ಅಂತ ತೀರ್ಪು ಹಾಜರುಪಡಿಸಿರುತ್ತಾರೆ.

17. ಅದೇ ಪ್ರಕಾರ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ **MFA No.2930/2020 The Special Land Acquisition Officer and another – vs – Muthaiah and**

**others,** ಸದರಿ ತೀರ್ಪಿನ ಪ್ಯಾರಾ-7 ರಲ್ಲಿ ಅವಾರ್ಡ್ ಮಾಡಿದ್ದು ನ್ಯಾಯ ಸಮ್ಮತವಾಗಿಲ್ಲದೇ ಇದ್ದಾಗ ಸದರಿ ಅವಾರ್ಡ್ ಬದಲಾವಣೆ ಮಾಡುವ ಸಲುವಾಗಿ ಸದರಿ ಅವಾರ್ಡ್ ಅನ್ನು ರದ್ದುಪಡಿಸಿ ಪ್ರಕರಣವನ್ನು ಜಿಲ್ಲಾ ನ್ಯಾಯಾಲಯಕ್ಕೆ ರಿಮ್ಯಾಂಡ್ ಮಾಡಿದ್ದರ ಬಗ್ಗೆ ತೀರ್ಪು ಇರುತ್ತದೆ. ಸದರಿ ತೀರ್ಪುಗಳನ್ನು ಪರಿಶೀಲಿಸಲಾಗಿ ಎದುರುದಾರ 3 ಇವರು ಮಾಡಿದಂತ ಆದೇಶದಲ್ಲಿ ಸಮರ್ಪವಾದ ಕಾರಣಗಳನ್ನು ನೀಡಿರುವುದರಿಂದ ಅವಾರ್ಡ್ ನಲ್ಲಿ ಯಾವುದೇ ರೀತಿಯ ಅಕ್ರಮ, ಕಾನೂನು ಬಾಹಿರವಾಗಿ ಇಲ್ಲದೇ ಇರುವುದರಿಂದ, ಸದರಿ ತೀರ್ಪುಗಳ ವಿದ್ಯಮಾನಗಳು ಬೇರೆ ಇದ್ದು ಈ ಕೇಸಿನ ವಿದ್ಯಮಾನಗಳು ಬೇರೆ ಇರುವುದರಿಂದ ಸದರಿ ತೀರ್ಪುಗಳು ಈ ಕೇಸಿಗೆ ಈ ಸಮಯದಲ್ಲಿ ಅನ್ವಯವಾಗಲಾರವು.

18. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸದರಿ ಕಾನೂನಿನ ಅಡಿಯಲ್ಲಿ ನೀಡಿದಂತ ತೀರ್ಪು **(2025)2 S.C.C. 417 OPG POWER GENERATION PRIVATE LIMITED -Vs- ENEXIO POWER COOLING SOLUTIONS INDIA PRIVATE LIMITED AND ANOTHER**, ಈ ತೀರ್ಪಿನ ಪ್ಯಾರಾ-63 ರಿಂದ 74 ಅನ್ನು ಪರಿಶೀಲಿಸಲಾಗಿ, ಸದರಿ ಕಾನೂನು ಕಲಂ 34(2) (ಬಿ)(ii) ಪ್ರಕಾರ ಆರ್ಬಿಟ್ರಲ್ ಅವಾರ್ಡ್‌ನಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಲು ಬರಲಾರದು, ಅವಾರ್ಡ್ ಅಕ್ರಮವಾಗಿದ್ದಲ್ಲಿ ಅಥವಾ ಕಾನೂನು ಬಾಹಿರವಾಗಿದ್ದಲ್ಲಿ ಮಾತ್ರ ಪರಿಗಣಿಸಬೇಕಾಗುತ್ತದೆ, ಆರ್ಬಿಟ್ರಲ್ ಇವರು ಸಮರ್ಪಕವಾದ ಕಾರಣಗಳನ್ನು ನೀಡಿ ಆದೇಶ ಮಾಡಿದ್ದಲ್ಲಿ ಮಾನ್ಯ ನ್ಯಾಯಾಲಯ ಸದರಿ ಆದೇಶದಂತೆ ಹಸ್ತಕ್ಷೇಪ ಮಾಡಲು ಬರಲಾರದು ಹಾಗೂ ಆದೇಶವನ್ನು ಬದಲಾವಣೆ ಮಾಡಲು ಬರಲಾರದು ಅಂತ ತೀರ್ಪು ಇರುತ್ತದೆ. ಸದರಿ ತೀರ್ಪಿನ ಪ್ರಕಾರ 3 ನೇ

ಎದುರುದಾರರು ಉಭಯ ವಕೀಲರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಸದರಿ ಎದುರುದಾರ ಜಮೀನು ಭೂಪರಿವರ್ತಿತ ಜಮೀನು ಮೌಲ್ಯ, ಮಾರುಕಟ್ಟೆ ಮೌಲ್ಯ ಸ್ವಾಧೀನಪಡಿಸಿಕೊಳ್ಳುವಾಗ ಇರುವ ಮೌಲ್ಯವನ್ನು ಪರಿಗಣಿಸಿ ಅವಾರ್ಡ್ ಮಾಡಿದ್ದು ನ್ಯಾಯಸಮ್ಮತವಾಗಿರುತ್ತದೆ. ಆದ್ದರಿಂದ ಎದುರುದಾರ 3 ಇವರು ಮಾಡಿದಂತ ಅವಾರ್ಡ್ ನಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಇಲ್ಲದೇ ಇರುದರಿಂದ ಅಂಶ 1 ಮತ್ತು 2 ಅನ್ನು ನಕಾರಾತ್ಮಕವಾಗಿ ಉತ್ತರಿಸಲಾಯಿತು.

19. <u>ಅಂಶ ಸಂಖ್ಯೆ-**3:**</u> ಅಂಶ ಸಂಖ್ಯೆ 1 ಮತ್ತು 2 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## ಆದೇಶ

ಅರ್ಜಿದಾರರ ಪರ ವಕೀಲರು ಮಧ್ಯಸ್ಥಗಾರ ಮತ್ತು ಸಂಧಾನ ಕಾಯ್ದೆ -1996 ರ ಕಲಂ-34 ಸಹ ಕಲಂ 3 ಜಿ(6) ರಡಿಯಲ್ಲಿ ಸಲ್ಲಿಸಿದಂತ ಅರ್ಜಿಯನ್ನು ತಿರಸ್ಕರಿಸಲಾಯಿತು.

ಖರ್ಚಿನ ಮೇಲೆ ಯಾವುದೇ ಆದೇಶ ಇಲ್ಲ.

ಸದರಿ ಆದೇಶದ ಪ್ರತಿಯೊಂದಿಗೆ ಮೂಲ ಕಡತವನ್ನು 1 ನೇ ಎದುರುದಾರರ ಕಛೇರಿಗೆ ಕಳುಹಿಸಲು ಆದೇಶಿಸಲಾಯಿತು.

*(ಈ ತೀರ್ಪಿನ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ I ರವರಿಗೆ ನೇರವಾಗಿ ಗಣಕಯಂತ್ರ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ 2 ನೇ ಜೂನ್ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್. ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ರಾಮನಗರ.